**ಅ.ದಾವಾ ನಂ. 97/2019** **ಪಿ.ಡಬ್ಲ್ಯೂ-2**

**ದಿನಾಂಕ 28/06/2023 ರಂದು ಸಾಕ್ಷಿಯನ್ನು ಪುನಹ ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಹೆಚ್.ಆರ್.ಜೆ. ವಕೀಲರಿಂದ**

ನಾನು ಮತ್ತು ಪ್ರತಿವಾದಿ ಒಂದೇ ವರ್ಷದಲ್ಲಿ ಕೆಲಸಕ್ಕೆ ಸೇರಿ ಇಬ್ಬರೂ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದೇವೆ ಎಂದರೆ ಸರಿ. ನಾನು ಮತ್ತು ಪ್ರತಿವಾದಿ ಬಹಳ ವರ್ಷಗಳಿಂದ ಸ್ನೇಹಿತರು ಎಂದರೆ ಸರಿ. ನನಗೆ ಈ ಪ್ರಕರಣದ ವಾದಿ 10-15 ವರ್ಷಗಳಿಂದ ಪರಿಚಯ. ವಾದಿ ಮನೆಯಲ್ಲಿ ಇರುವ ಕುಟುಂಬ ಸದಸ್ಯರ ಬಗ್ಗೆ ಆತನ ತಂದೆ-ತಾಯಿಯ ವಿವರಗಳು, ಆತನ ಹೆಂಡತಿ ವಿವರಗಳು ಹಾಗೂ ಆತನಿಗೆ ಎಷ್ಟು ಮಂದಿ ಮಕ್ಕಳು ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ನನಗೆ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯಲು ನ್ಯಾಯಾಲಯದಿಂದ ನೋಟಿಸ್ ಬಂದಿತ್ತು. ವಾದಿ ಈ ದಿನ ವಿಚಾರಣೆ ಇದೆಯೆಂತಲೂ ನಾನು ಬರಬೇಕೆಂತಲೂ ಹೇಳಿ ಕರೆದಿರುತ್ತಾರೆ ಎಂದರೆ ಸರಿ. ವಾದಿಯನ್ನು ಹೊರತುಪಡಿಸಿ ನಿಮ್ಮ ಪರಿಚಯಸ್ಥರು ಯಾರಾದರೂ ನ್ಯಾಯಾಲಯದಲ್ಲಿ ಸಾಕ್ಷ್ಯನುಡಿಯಬೇಕೆಂದು ನಿಮ್ಮನ್ನು ಕರೆದರೆ ನೀವು ಬರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

2. ಪ್ರತಿವಾದಿ ವಾದಿಯನ್ನು ಹಣ ಬೇಕೆಂದು 05.06.2017 ರಂದು ಕೇಳಿಕೊಂಡಿರುತ್ತಾರೆ. ಹಣ ಕೇಳುವ ಸಂದರ್ಭದಲ್ಲಿ ನಾನು ಸ್ಥಳದಲ್ಲಿ ಉಪಸ್ಥಿತನಿದ್ದೆನು. 10.04.2017 ರಂದು ಸುರೇಶ್ ವಕೀಲರ ಬಳಿ ಮಂಜು ಮತ್ತು ದೇವಯ್ಯರವರು ನನ್ನನ್ನು ಕರೆದುಕೊಂಡು ಹೋದರು. ದಿಃ 10.04.2017 ರಂದು ಹೆಚ್.ಡಿ ರಾಜು ಎನ್ನುವ ಮತ್ತೋರ್ವ ವ್ಯಕ್ತಿಯೂ ನಮ್ಮ ಜೊತೆ ಬಂದಿದ್ದನು. ದಿಃ 10.04.2017 ರಂದು ದೇವಯ್ಯರವರು ಹಣ ಅವಶ್ಯಕತೆ ಇರುವುದಾಗಿ ಕೇಳಿರುತ್ತಾರೆ. ಹಣವನ್ನು 10.04.2017 ರಂದೇ ಮಂಜು ದೇವಯ್ಯ ರವರಿಗೆ ಕೊಟ್ಟಿರುತ್ತಾರೆ. ಮಂಜು ದೇವಯ್ಯನಿಗೆ 100 ರೂ. ಮುಖಬೆಲೆಯ 10 ಕಟ್ಟಲ್ಲಿ ಹಣ ನೀಡಿರುತ್ತಾರೆ. ಹಣ ನೀಡಬೇಕಾದರೆ ನಾವೆಲ್ಲರೂ ಸುರೇಶ ವಕೀಲರ ಕಛೇರಿಯಲ್ಲಿಯೇ ಇದ್ದೆವು. ಹಣ ನೀಡುವ ಕಾಲಕ್ಕೆ ದೇವಯ್ಯರವರು ಪ್ರೋನೋಟ್ ಒಂದನ್ನು ಮಂಜು ರವರಿಗೆ ನೀಡಿ ಸುರೇಶ್ ವಕೀಲರು ಅದನ್ನು ಬರೆದಿರುತ್ತಾರೆ. ಪ್ರೋನೋಟ್ ಕೈಬರವಣಿಗೆಯಲ್ಲಿತ್ತು. ಪ್ರೋನೋಟಲ್ಲಿ ಬರೆದಿದ್ದದಂತಹ ಅಂಶಗಳನ್ನು ನಾನೇನು ಓದಿ ತಿಳಿದುಕೊಂಡಿಲ್ಲ. ದೇವಯ್ಯನವರು ಹಣ ಪಡೆದ ನಂತರ ನನ್ನ ಸಮಕ್ಷಮದಲ್ಲಿ ಹೆಬ್ಬೆಟ್ಟಿನ ಗುರುತನ್ನೂ ಹಾಕಿದರು ಮತ್ತು ಸಹಿಯನ್ನೂ ಮಾಡಿದರು. ಸಹಿಯನ್ನು ದೇವಯ್ಯ ಆಂಗ್ಲ ಭಾಷೆಯಲ್ಲಿ ಮಾಡಿರುತ್ತಾರೆ. ಪ್ರತಿವಾದಿ ಪ್ರೋನೋಟ್ ನಲ್ಲಿ ಎರಡು ಬಾರಿ ಸಹಿ ಮಾಡಿ ಎರಡು ಬಾರಿ

ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ. ಹೆಬ್ಬೆಟ್ಟಿನ ಗುರುತಿನ ಮೇಲೆ ವಕೀಲರು LTM of Devaiah ಎಂದು ಬರೆದಿರುತ್ತಾರೆ.

3. ಪ್ರೋನೋಟ್ ಮೇಲೆ ಆನ್ ಡಿಮ್ಯಾಂಡ್ ಪ್ರೋನೋಟ್ ಎಂತಷ್ಟೇ ಬರೆದಿತ್ತು. ಅಷ್ಟಕ್ಕೆ ಮಾತ್ರ ದೇವಯ್ಯ ಸಹಿ ಮತ್ತು ಹೆಬ್ಬೆಟ್ಟಿನ ಗುರುತು ಹಾಕಿದರು ಎಂದರೆ ಸರಿ. ನಾನು ಹಣ ಪಡೆದುದರ ಬಗ್ಗೆ ಸಾಕ್ಷಿಯಾಗಿ ಸಹಿ ಹಾಕಿದೆನು. ನಾನು ಪ್ರೋನೋಟ್ ಗೆ ಮೊದಲನೇ ಸಾಕ್ಷಿಯಾಗಿ ಸಹಿ ಹಾಕಿದ್ದು, ರಾಜು 2 ನೇ ಸಾಕ್ಷಿಯಾಗಿ ಸಹಿ ಹಾಕಿರುತ್ತಾರೆ. ನಾನು ಹಾಗೂ ರಾಜು ಇಬ್ಬರು ತಲಾ ಒಂದೊಂದು ಸಹಿಯನ್ನಷ್ಟೇ ಹಾಕಿದೆವು. ಆ ಸಹಿಯನ್ನು ಹೊರತುಪಡಿಸಿ ನಾನು ಬೇರೆ ಇನ್ಯಾವುದೇ ದಾಖಲೆಗೆ ಸಹಿ ಹಾಕಿಲ್ಲ. ವಾದಿ ಮಂಜು ಸಹ ಸ್ಟಾಂಪಿನ ಮೇಲೆ ಸದರಿ ದಿನ ಸಹಿ ಹಾಕಿರುತ್ತಾರೆ. ಸಹಿ ಪೋಸ್ಟಲ್ ಸ್ಟಾಂಪಿನ ಮೇಲೆ ಹಾಕಿದ್ದಾರಾ ಅಥವಾ ರೆವಿನ್ಯೂ ಸ್ಟಾಂಪಿನ ಮೇಲೆ ಹಾಕಿದ್ದಾರಾ ಎಂಬ ಪ್ರಶ್ನೆಗೆ ಸಾಕ್ಷಿ ಹೇಳುತ್ತಾರೆ ರೆವಿನ್ಯೂ ಸ್ಟಾಂಪಿನ ಮೇಲೆ ಹಾಕಿದ್ದಾರೆ ಎಂದು. ಎಲ್ಲಾ ವ್ಯವಹಾರ ಆದ ನಂತರ ಪತ್ರವನ್ನು ಮಂಜು ತೆಗೆದುಕೊಂಡು ಹೋದರು. ಮನೆಯಲ್ಲಿ ತೊಂದರೆ ಇದೆಯೆಂತಲೂ ಹಾಗೂ ಮಕ್ಕಳ ಮದುವೆ ಮಾಡಬೇಕೆಂತಲೂ ದೇವಯ್ಯ ರವರು ಹಣ ಪಡೆದಿರುತ್ತಾರೆ. ಮೊದಲಿಗೆ ನಾನು ಮತ್ತು ಪ್ರತಿವಾದಿ ಸ್ನೇಹಿತರಾದ ಕಾರಣ ಜೊತೆಗೆ ವಾಕ್ ಹೋಗುವುದು ಹಾಗೂ ಮನೆಗಳಿಗೆ ಹೋಗಿ ಬರುವುದು ಮಾಡುತ್ತಿದ್ದೆವು ಎಂದರೆ ಸರಿ. ನಮ್ಮ ಸ್ನೇಹದ ಕಾರಣ ನಮ್ಮಿಬ್ಬರ ಸಹಿಗಳನ್ನು ಒಬ್ಬರೊಬ್ಬರು ನೋಡಿಕೊಂಡಿದ್ದೇವೆ ಎಂದರೆ ಸರಿ.

4. ದೇವಯ್ಯ ರವರಿಗೆ ಯಾವುದೇ ಹಣದ ಅವಶ್ಯಕತೆ ಇರುವುದಿಲ್ಲ. ನನ್ನ ಮಂಜುವಿನ ಬಳಿ ಆತ ಕರೆದುಕೊಂಡು ಹೋಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯ ಜೊತೆ ಇತರೆ ಹಣಕಾಸಿನ ವ್ಯವಹಾರ ಮಾಡಿದ್ದೇನೆ ಎಂದರೆ ಸರಿ. ನಾನೇ ಪ್ರತಿವಾದಿಯ ಸಹಿಯನ್ನು ಪ್ರೋನೋಟ್ ಗೆ ಹಾಕಿ ಈ ದಿನ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ 1 ರಲ್ಲಿರುವ ಹೆಬ್ಬೆಟ್ಟಿನ ಗುರುತು ನನ್ನದೇ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಸುರೇಶ ವಕೀಲರ ಕಛೇರಿಗೆ ಹೋಗದೇ ವಾದಿ ಮಂಜು ಜೊತೆ ಶಾಮೀಲಾಗಿ ಯಾವುದೇ ಹಣ ದೇವಯ್ಯನವರು ಪಡೆಯದೇ ಇದ್ದರೂ ಅವರಿಗೆ ತೊಂದರೆ ನೀಡುವ ದುರುದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ಅಂಶಗಳನ್ನು ನಾನು ತಿಳಿದುಕೊಂಡಿಲ್ಲ.

5. ಪ್ರಕರಣದ ವಿದ್ಯಾಮಾನಗಳು ಏನೂ ಗೊತ್ತಿಲ್ಲದಿದ್ದರೂ ವಾದಿಯ ಜೊತೆ ಶಾಮೀಲಾಗಿ ಪ್ರೋನೋಟ್ ನಲ್ಲಿ ದೇವಯ್ಯ ರವರ ಸಹಿ ಮತ್ತು ಹೆಬ್ಬೆಟ್ಟನ್ನು ನಾನೇ ಹಾಕಿ ಈ ದಿನ ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಸಾಕ್ಷ್ಯ ಹೇಳುವ ಹವ್ಯಾಸ ಇಟ್ಟುಕೊಂಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸ.ಇ.**

**ಜೆಎಂಎಫ್‌ಸಿ., ಹೊಳೆನರಸೀಪುರ.**